**3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಬೆಳಗಾವಿ**
**ಇವರ ನ್ಯಾಯಾಲಯದಲ್ಲಿ, ಬೆಳಗಾವಿ.**

ಸ್ಪೆಷಲ್ ಕೇಸ ನಂಃ 75/2018
ಪಿಡಬ್ಲು :36 ಸಿಡಬ್ಲು :53

ಸಾಕ್ಷಿಯ ಹೆಸರು : ಶ್ರೀ.ಮೊಹಮ್ಮದ ರಫಿಕ್ ತಹಶೀಲ್ದಾರ
ತಂದೆಯ ಹೆಸರು : ಶ್ರೀ.ಮಲಿಕಸಾಬ ತಹಶೀಲ್ದಾರ
ವಯಸ್ಸು : 42 ವರ್ಷ
ಉದ್ಯೋಗ : ಪೋಲಿಸ ಇನ್ಸಪೆಕ್ಟರ, ವಿದ್ಯಾಗಿರಿ ಪೋಲಿಸ ಠಾಣೆ, ಧಾರವಾಡ
ವಾಸ್ತವ್ಯ : ಧಾರವಾಡ
ದಿನಾಂಕ : 13-01-2026 ರಂದು ಸಾಕ್ಷೀದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

(**ಸಾಕ್ಷಿಯನ್ನು ವಿಡಿಯೋ ಕಾನ್ಪರೆನ್ಸ ಮುಖಾಂತರ ವಿಚಾರಣೆಗೆ ತೆಗೆದುಕೊಳ್ಳಲಾಯಿತು. ಸಾಕ್ಷಿಯು ತಾವು ಕಾರ್ಯನಿರ್ವಹಿಸುತ್ತಿರುವ ವಿದ್ಯಾಗಿರಿ ಪೋಲಿಸ ಠಾಣೆ ಧಾರವಾಡ ಕಚೇರಿಯಿಂದ ತಮ್ಮ ಮೊಬೈಲ್ ಆಪ್ ನಿಂದ ನ್ಯಾಯಾಲಯದ ಗೂಗಲ್ ಮೀಟ್ ಆ್ಯಪ್ ಮೂಲಕ ವಿಚಾರಣೆಗೆ ಹಾಜರಾಗಿರುತ್ತಾರೆ. ಕೋಆರ್ಡಿನೇಟರ ಆಗಿ ಡಬ್ಲೂ.ಎ.ಎಸ್.ಐ ಶ್ರೀಮತಿ ಆರ್.ಕೆ. ರತ್ನಾಕರವರು ಹಾಜರಾಗಿರುತ್ತಾರೆ. ಸಾಕ್ಷಿಗೆ ನ್ಯಾಯಾಲಯದ ಚಿತ್ರಣ ಸ್ಪಷ್ಟವಾಗಿ ಕಾಣಿಸುತ್ತಿದೆಯೇ ಮತ್ತು ಧ್ವನಿ ಸ್ಪಷ್ಟವಾಗಿ ಕೇಳಿಸುತ್ತಿದೆಯೇ ಎಂದು ಸಾಕ್ಷಿಯಿಂದ ಖಾತರಿಪಡಿಸಿಕೊಂಡು ನ್ಯಾಯಾಲಯದ ಪ್ರಥಮ ದರ್ಜೆ ಸಹಾಯಕರಾದ ಶ್ರೀ.ಎಸ್.ಎಲ್.ದೇವರಮನಿ ರವರನ್ನು ಕೋಆರ್ಡಿನೇಟರ ಆಗಿ ನೇಮಿಸಿಕೊಂಡು ಆರೋಪಿ ಪರ ವಕೀಲರು ಹಾಗೂ ಸರ್ಕಾರಿ ವಕೀಲರ ಉಪಸ್ಥಿತಿಯಲ್ಲಿ ತೆರೆದ ನ್ಯಾಯಾಲಯದಲ್ಲಿ ವಿಚಾರಣೆಯನ್ನು ವಿಡಿಯೋ ಕಾನ್ಪರೆನ್ಸ ಮುಖಾಂತರ ಸಾಕ್ಷಿಯ ವಿಚಾರಣೆ ತೆಗೆದುಕೊಳ್ಳಲಾಯಿತು. ಸಾಕ್ಷಿಯು ತಮ್ಮ ಹತ್ತಿರ ಈ ಪ್ರಕರಣದ ಕಡತವು ಇರುವುದಾಗಿ ನುಡಿಯುತ್ತಾರೆ.**)

**ಮುಖ್ಯ ವಿಚಾರಣೆ : ವಿಶೇಷ ಸರ್ಕಾರಿ ಅಭಿಯೋಜಕರಿಂದ**

ಡಿಸೆಂಬರ 2016 ರಿಂದ ಜುಲೈ 2018 ರವರೆಗೆ ಹಾರೂಗೇರಿ ಪೋಲಿಸ ಠಾಣೆಯಲ್ಲಿ ಆರಕ್ಷಕ ಉಪನೀರಿಕ್ಷಕರಾಗಿ ಕರ್ತವ್ಯ ನಿರ್ವಹಿಸಿದ್ದೇನೆ.

2. ದಿನಾಂಕಃ 26-08-2017 ರಂದು ನಾನು ಠಾಣೆಯಲ್ಲಿ ಸಂಜೆ 7:50 ಗಂಟೆಗೆ ಪ್ರಭಾರ ಕರ್ತವ್ಯದಲ್ಲಿದ್ದಾಗ ಹಾರೂಗೇರಿಯ ಮಲ್ಲಿಕಾರ್ಜುನ ಮಲ್ಟಿಸ್ಪೆಶಾಲಿಟಿ ಆಸ್ಪತ್ರೆಯಿಂದ ಎಮ್.ಎಲ್.ಸಿ ಬಂದಿದ್ದು ಅದರ ಅನ್ವಯ ನಾನು ಕೂಡಲೇ ಆಸ್ಪತ್ರೆಗೆ ಭೇಟಿ ನೀಡಿದ್ದು, ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದ ಗಾಯಾಳು ಬಸಪ್ಪ ಮಾದರ ಇವರನ್ನು ಭೇಟಿ ಮಾಡಿದ್ದು, ಆಸ್ಪತ್ರೆಯಲ್ಲಿ ವೈದ್ಯರ ಸಮಕ್ಷಮ ಬಸಪ್ಪ ಅವರ ಪರವಾಗಿ ಒಬ್ಬರು ದೂರನ್ನು ಬರೆದುಕೊಟ್ಟಿದ್ದು ನಾನು ಅದನ್ನು ಸ್ವೀಕರಿಸಿಕೊಂಡು ಠಾಣೆಗೆ 9:00 ಗಂಟೆಗೆ ಬಂದು ದೂರನ್ನು ಅಪರಾಧ ಸಂಖ್ಯೆ 157/2017 ರಂತೆ ದಂಡ ಸಂಹಿತೆ ಕಲಂ 143, ಕಲಂ 147, ಕಲಂ 148 , ಕಲಂ 324, ಕಲಂ 307, ಕಲಂ 354, ಕಲಂ 504, ಕಲಂ 506, ಸಹ ವಾಚಕ ಕಲಂ 149 ಹಾಗೂ 3(1)(r), 3(1)(s), 3(2)(wi), 3(2)(v) ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡ ದೌರ್ಜನ್ಯ ತಡೆ ಕಾಯ್ದೆ ಅಡಿಯಲ್ಲಿ ಪ್ರಕರಣವನ್ನು ನೊಂದಣಿ ಮಾಡಿದ್ದೇನೆ. ಮೂಲ ದೂರು ಮತ್ತು ಪ್ರಥಮ ವರ್ತಮಾನ ವರದಿಯನ್ನು ಠಾಣಾ ಸಿಬ್ಬಂದಿ ಚಾಸಾಃ 42 ಪಿ.ಸಿ ನಂಬರ 2783 ಎಸ್.ಎಸ್.ಲೋಕುರೆ ಅವರು ಮುಖಾಂತರ 3 ನೇ ಹೆಚ್ಚುವರಿ ಸತ್ರ ನ್ಯಾಯಾಲಯಕ್ಕೆ ಕಳುಹಿಸಿಕೊಟ್ಟಿದ್ದೇನೆ ಮತ್ತು ಅದರ ನಕಲನ್ನು ಮೇಲಾಧಿಕಾರಿಗಳಿಗೆ ಕಳುಹಿಸಿಕೊಟ್ಟಿದ್ದೇನೆ.

3. ದೂರು, ದೂರಿನ ಮೇಲಿನ ಹಿಂಬರಹವನ್ನು ಸಾಕ್ಷಿ ಗುರುತಿಸಿದ್ದಾರೆ. ದೂರನ್ನು ಈಗಾಗಲೇ ನಿಪಿ-1 ಎಂದು ಗುರುತಿಸಿದ್ದು, ಅದರ ಮೇಲಿರುವ ಹಿಂಬರಹವನ್ನು ನಿಪಿ-1 ಬಿ

ಎಂದು, ಅದರ ಮೇಲಿರುವ ಸಾಕ್ಷಿಯ ಸಹಿಯನ್ನು ನಿಪಿ-1 [ಸಿ] ಎಂದು ಗುರುತಿಸಲಾಯಿತು. ಪ್ರಥಮ ವರ್ತಮಾನ ವರದಿಯನ್ನು ನಿಪಿ-64 ಎಂದು, ಅದರ ಮೇಲಿರುವ ಸಾಕ್ಷಿಯ ಸಹಿಯನ್ನು ನಿಪಿ-64 [ಎ] ಎಂದು ಗುರುತಿಸಲಾಯಿತು.

4. ಈ ಪ್ರಕರಣದಲ್ಲಿ ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡ ದೌರ್ಜನ್ಯ ತಡೆ ಕಾಯ್ದೆ ಅಡಿಯ ಕಲಂಗಳನ್ನು ಅಳವಡಿಸಿದ್ದರಿಂದ ತನಿಖೆಯನ್ನು ಡಿ.ವೈ.ಎಸ್.ಪಿ ಅಥಣಿ ಚಾಸಾಃ 54 ಸತೀಶ ಎಸ್.ಚಿಟಗುಬ್ಬಿ ಅವರಿಗೆ ನೀಡಿದ್ದೇನೆ.

5. ಮರುದಿನ ಅಂದರೆ ದಿನಾಂಕಃ 27-08-2017 ರಂದು ಚಾಸಾಃ 54 ರವರು ಪ್ರಕರಣದ ಆರೋಪಿತರನ್ನು ಪತ್ತೆ ಮಾಡುವಂತೆ ನನಗೆ ಲಿಖಿತವಾಗಿ ಆದೇಶಿಸಿದ್ದರು ಅದರಂತೆ ನಾನು ನನ್ನ ಸಿಬ್ಬಂದಿಯವರನ್ನು ನೇಮಿಸಿದ್ದೇನು. ಮುಗಳಖೋಡ ಗ್ರಾಮಕ್ಕೆ ಭೇಟಿ ನೀಡಿದ್ದು ನಂತರ ಆರೋಪಿತರು ಸವಾರಿ ಫೂಲ ಹತ್ತಿರ ಮಧ್ಯಾಹ್ನ 15:30 ಗಂಟೆಗೆ ಆರೋಪಿತರಾದ 1. ಅಜಿತ ಲಕ್ಷ್ಮಣ ಬಾಬನ್ನವರ, 2. ಸುರೇಂದ್ರ ಲಕ್ಷ್ಮಣ ಬಾಬನ್ನವರ, 3. ಪದ್ಮಣ್ಣ ರಾಮಪ್ಪ ಬಾಬನ್ನವರ, 4. ಅಪ್ಪಾಸಾಬ ಉಮಣ್ಣ ಬಾಬಣ್ಣವರ, 5. ಬುಜಪ್ಪ ಅಲಿಯಾಸ ಬುಜಬಲಿ ಬಾಬನ್ನವರ, 6. ಭೀಮಪ್ಪ ನೇಮಣ್ಣ ವಡ್ರಾಳಿ, 7. ಭರತೇಶ ರಾಮಪ್ಪ ಬಾಬನ್ನವರ, 8.ಮಾಳಪ್ಪ ವಿಠ್ಠಲ ಅಳಗವಾಡಿ ಇವರುಗಳನ್ನು ವಶಕ್ಕೆ ಪಡೆದುಕೊಂಡು ಮಧ್ಯಾಹ್ನ 4:00 ಗಂಟೆಗೆ ಡಿ.ವೈ.ಎಸ್.ಪಿ ಅವರ ಮುಂದೆ ವರದಿಯೊಂದಿಗೆ ಹಾಜರುಮಾಡಿದ್ದೇನೆ. ವರದಿಯನ್ನು ನಿಪಿ-65 ಎಂದು, ಅದರ ಮೇಲಿರುವ ಸಾಕ್ಷಿಯ ಸಹಿಯನ್ನು ನಿಪಿ-65 [ಎ] ಎಂದು ಗುರುತಿಸಲಾಯಿತು.

6. ನಾನು ವಶಕ್ಕೆ ಪಡೆದುಕೊಂಡ ಆರೋಪಿತರನ್ನು ಈಗ ಗುರುತಿಸಲು ಕಷ್ಟ ಆಗುತ್ತದೆ ಕಾರಣ ಘಟನೆ ನಡೆದು 10 ವರ್ಷಗಳಾಗಿರುತ್ತದೆ.

**<u>ಪಾಟೀ ಸವಾಲುಃ 1 ಮತ್ತು 2 ನೇ ಆರೋಪಿತರ ಪರ ಶ್ರೀ.ಎಮ್.ಸಿ.ಕೆ ವಕೀಲರಿಂದ ಶ್ರೀ.ಬಿ.ಜೆ.ಜಿ ವಕೀಲರ ಪರವಾಗಿ</u>**

ಬಾಬನ್ನವರ ಅವರು ಮೊದಲಿಗೆ ದೂರನ್ನು ನೀಡಿದ್ದರು ಎನ್ನುವುದು ಸರಿಯಲ್ಲ. ಬಾಬನ್ನವರು ಮೊದಲಿಗೆ ದೂರು ನೀಡಿದ್ದರೂ ಸಹ ಉದ್ದೇಶಪೂರ್ವಕವಾಗಿ ಅದನ್ನು ನಂತರದಲ್ಲಿ ನೊಂದಣಿ ಮಾಡಿದ್ದೇನೆ ಎನ್ನುವುದು ಸರಿಯಲ್ಲ. ನೀವು ವೈಯಕ್ತಿಕವಾಗಿ ಘಟನಾ ಸ್ಥಳಕ್ಕೆ ಭೇಟಿ ನೀಡಿದ್ದೀರಾ ಎನ್ನುವುದಕ್ಕೆ ಸಾಕ್ಷಿ ಪ್ರಕರಣದ ತನಿಖೆಯನ್ನು ಡಿ.ವೈ.ಎಸ್.ಪಿ ಅವರಿಗೆ ವರ್ಗಾಯಿಸಿದ ನಂತರ ನಾನು ಅವರೊಂದಿಗೆ ಘಟನಾ ಸ್ಥಳಕ್ಕೆ ಹೋಗಿದ್ದೇನೆ ಎಂದು ಹೇಳಿದ್ದಾರೆ. ಪ್ರಕರಣ ದಾಖಲಾಗುವ ಮೊದಲು ವಿವಾದಿತ ಸ್ಥಳಕ್ಕೆ ಎರಡು ಬಾರಿ ಭೇಟಿ ನೀಡಿ ಎರಡೂ ಸಮುದಾಯದವರಿಗೆ ಜಗಳ ಮಾಡಬಾರದು ಎಂದು ತಿಳುವಳಿಕೆ ಹೇಳಿದ್ದೇನೆ. ಅದು ವಿವಾದಿತ ಸ್ಥಳವಾಗಿದ್ದರಿಂದ ಅಲ್ಲಿ ಯಾವುದೇ ಅಹಿತಕರ ಘಟನೆ ನಡೆಯಬಾರದು ಎಂದು ನಾನು ಭೇಟಿ ನೀಡಿದ್ದೇನು. ಮತ್ತು ಎರಡೂ ಸಮುದಾಯದವರ ಮೇಲೆ ದಂಡ ಪ್ರಕ್ರಿಯೆ ಸಂಹಿತೆ ಕಲಂ 107 ಅಡಿಯಲ್ಲಿ ಕ್ರಮ ಜರುಗಿಸಿದ್ದೇನು.

2. ನಾನು ಸ್ಥಳಕ್ಕೆ ಭೇಟಿ ನೀಡಿರುವುದಿಲ್ಲ, ಆದರೂ ಸಹ ಆ ಸ್ಥಳ ವಿವಾದಿತ ಸ್ಥಳ ಎಂದು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ. ದೂರನ್ನು ನೊಂದಣಿ ಮಾಡುವ ಸಮಯದಲ್ಲಿ ಬಾಬನ್ನವರ ಕುಟುಂಬದವರು ಮನೆ ಕಟ್ಟುವ ಸಮಯದಲ್ಲಿ ಮಾದರ ಸಮಾಜದವರು ಹೋಗಿ ದಾಂಧಲೆ ಮಾಡಿ ತಾವೇ ಬಿದ್ದು ಗಾಯ ಮಾಡಿಕೊಂಡಿದ್ದಾರೆ ಎಂದು ನನಗೆ ಗೊತ್ತಾಗಿತ್ತು ಎನ್ನುವುದಕ್ಕೆ ಸಾಕ್ಷಿ ಅವರೇ ಬಿದ್ದು ಗಾಯ ಮಾಡಿಕೊಂಡಿರುವುದಿಲ್ಲ ಆದರೆ ಎರಡೂ ಸಮುದಾಯದವರು ಜಗಳ ಮಾಡಿಕೊಂಡಿದ್ದಾರೆ ಎಂದು ಗೊತ್ತಾಯಿತು ಎಂದು ಹೇಳಿದ್ದಾರೆ. ಬಾಬನ್ನವರ ಕುಟುಬಂದವರು ಕಟ್ಟಡ ಕಟ್ಟುವ ಸಮಯದಲ್ಲಿ ಮಾದರ

ಸಮುದಾಯದ 50-60 ಜನರು ಬಂದು ಬಾಬನ್ನವರ ಮತ್ತು ಅವರ ಕಡೆಯವರನ್ನು ಹೊಡೆದು ಓಡಿ ಹೋಗುವಾಗ ಬಿದ್ದು ಅವರುಗಳು ಗಾಯ ಮಾಡಿಕೊಂಡಿರುತ್ತಾರೆ ಎನ್ನುವ ಬಗ್ಗೆ ನನಗೆ ಮಾಹಿತಿ ಇದ್ದರೂ ಸಹ ನಾನು ಈಗ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ.

3. ಆರೋಪಿತರಾದ 1. ಅಜಿತ ಲಕ್ಷ್ಮಣ ಬಾಬನ್ನವರ, 2. ಸುರೇಂದ್ರ ಲಕ್ಷ್ಮಣ ಬಾಬನ್ನವರ, 3. ಪದ್ಮಣ್ಣ ರಾಮಪ್ಪ ಬಾಬನ್ನವರ, 4. ಅಪ್ಪಾಸಾಬ ಉಮಣ್ಣ ಬಾಬಣ್ಣವರ, 5. ಬುಜಪ್ಪ ಅಲಿಯಾಸ ಬುಜಬಲಿ ಬಾಬನ್ನವರ, 6. ಭೀಮಪ್ಪ ನೇಮಣ್ಣ ವಡ್ರಾಳಿ, 7. ಭರತೇಶ ರಾಮಪ್ಪ ಬಾಬನ್ನವರ, 8.ಮಾಳಪ್ಪ ವಿಠ್ಠಲ ಅಳಗವಾಡಿ ಇವರುಗಳು ತಮ್ಮ ಊರಿನಲ್ಲಿಯೇ ಇದ್ದರು ಅವರನ್ನು ಮುಗಳಖೋಡ ಗ್ರಾಮದಿಂದಲೇ ಕರೆದುಕೊಂಡು ಬಂದಿರುತ್ತೀರಿ ಎನ್ನುವುದು ಸರಿಯಲ್ಲ. ಸಾಕ್ಷಿ ಮುಂದುವರೆದು ಸವಾರಿ ಪೂಲ ಮುಗಳಖೋಡ ಗ್ರಾಮದ ಹದ್ದಿಯಲ್ಲಿಯೇ ಇದ್ದು ನಾನು ಅವರನ್ನು ಅಲ್ಲಿಂದಲೇ ಕರೆದುಕೊಂಡು ಬಂದಿದ್ದೇನೆ ಎಂದು ಹೇಳಿದ್ದಾರೆ.

4. ದೂರುದಾರರಾದ ಬಸಪ್ಪ ಮಾದರ ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ.

**<u>ಪಾಟೀ ಸವಾಲು 3 ರಿಂದ 34 ನೇ  ಆರೋಪಿತರ ಪರ ಶ್ರೀ ಎ.ಬಿ.ಬಿ .ವಕೀಲರಿಂದ</u>**

1 ಮತ್ತು 2 ನೇ ಆರೋಪಿತರ ಪರ ವಕೀಲರು ಮಾಡಿದ ಪಾಟೀ ಸವಾಲನ್ನು 3 ರಿಂದ 34 ನೇ ಆರೋಪಿತರ ಪರ ವಕೀಲರು ತಮ್ಮ ಪಾಟೀ ಸವಾಲು ಎಂದು ಅಳವಡಿಸಿಕೊಂಡಿರುತ್ತಾರೆ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮುಖಾಂತರ ಪಡೆದುಕೊಳ್ಳಲಾಯಿತು).

ಓ.ಹೇ.ಕೇ.ಸರಿ ಅದೆ.

(ಸವಿತಾ ಕುಮಾರಿ ಎನ್)
3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಳಗಾವಿ.